**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಂ.69/2023**

**ಚಾ.ಸಾಃ 19, ಫ್ರಾ.ಸಾಃ 06**

| | |
|---|---|
| ಸಾಕ್ಷಿದಾರನ ಹೆಸರು | ಮಂಜುನಾಥ ಇ. ಓ. |
| ತಂದೆಯ ಹೆಸರು | ಓಬಳಪ್ಪ |
| ವಯಸ್ಸು | 45 ವರ್ಷಗಳು |
| ಉದ್ಯೋಗ | ಪೊಲೀಸ್ ನಿರೀಕ್ಷಕರು, ಬೆಲಿಕೇರೆ ಠಾಣೆ |
| ವಾಸ್ತವ್ಯ | ಬೆಲಿಕೇರೆ |

**ಸಾಕ್ಷಿಯನ್ನು ದಿನಾಂಕಃ 21-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ದಿಃ 29-01-2023 ರಿಂದ 25-06-2023 ರವರೆಗೆ ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 02-05-2023 ರಂದು ನಾನು ಈ ಕೇಸಿನ ಕಡತವನ್ನು ಚಾಸಾ-17 ರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾ.ಸಾ. 1 ಮತ್ತು 6 ರವರ ಮರುಹೇಳಿಕೆ ಪಡೆದಿರುತ್ತೇನೆ. ದಿಃ 04-05-2023 ರಂದು ಚಾ.ಸಾ. 11 ಮತ್ತು 14 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ಅದೇ ದಿನ ಚಾ.ಸಾ. 14 ರವರಿಂದ ತನಿಖೆಯ ಕಾಲಕ್ಕೆ ಫೊಟೋ ತೆಗೆದ ಬಗ್ಗೆ ಕಲಂ 65 ಬಿ ಪ್ರಮಾಣ ಪತ್ರ ಪಡೆದಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು, ನಿಪಿ-12 ಎಂದು, ಸಾಕ್ಷಿ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ದಿಃ 25-05-2023 ರಂದು ಮೃತನ ಪಿ ಎಂ ವರದಿಯನ್ನು ಪಡೆದಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು, ನಿಪಿ-13 ಎಂದು, ಸಾಕ್ಷಿ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

ದಿಃ 18-06-2023 ರಂದು ಐ ಎಂ ವಿ ವರದಿಯನ್ನು ಪಡೆದಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು, ನಿಪಿ-14 ಎಂದು, ಸಾಕ್ಷಿ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

ಚಾ.ಸಾ. 18 ರವರು ಶವ ತನಿಖಾ ವರದಿಯನ್ನು ಹಾಜರುಪಡಿಸಿದ್ದು, ಅದು ಕಡತದಲ್ಲಿ ಇದ್ದು, ಈಗ ಅದನ್ನು ನೋಡುತ್ತಿದ್ದು, ನಿಪಿ-15 ಎಂದು ಗುರುತಿಸಲಾಯಿತು.

ನಂತರ ಕೇಸಿನ ಕಡತವನ್ನು ಚಾ.ಸಾ. 20 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಎ ಎಲ್ ಎ ಡಿ ಸಿ ಕಾನೂನು ಸೇವಾ ಸಮಿತಿಯ ವಕೀಲರಿಂದಃ**

ನಾನು ಸಾಕ್ಷಿದಾರರ ಯಾವುದೇ ಮರುಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಈಗಾಗಲೇ ದಾಖಲಾಗಿದ್ದ ಪ್ರಕರಣಕ್ಕೆ ಅನೂಕೂಲ ಆಗುವಂತೆ ಮರುಹೇಳಿಕೆಯನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**